**M – 2024**

Register Number : | | | | | | |

## Subject Code : 01

# KANNADA

Time : 3 Hours 15 Minutes] [Total No. of questions : 56] [Max. Marks : 80

### ಅ – ವಿಭಾಗ

### (ಬಹು ಆಯ್ಕೆಯ ಪ್ರಶ್ನೆಗಳು)

I. ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **(10×1=10)**

1) "..... ಬೆಸನೇನೆನ್ನದೆ ಜೀಯೆನ್ನದೆ ದೇವೆನ್ನದೆ
ಯೇಕುಸಿರದಿರ್ಪೆಯಂಗಾಧಿಪತೀ" – ಈ ಸಾಲುಗಳಲ್ಲಿ ದುರ್ಯೋಧನನಿಗೆ ಉಸಿರದೆ ಇರುವವರು ಯಾರು ?

ಅ) ಅಭಿಮನ್ಯು ಆ) ಕರ್ಣ ಇ) ಲಕ್ಷಣಕುಮಾರ ಈ) ದ್ರೋಣ

2) ತಪವನ್ನು ಘಟ್ಟಿವಾಳಯ್ಯನು ಏನೆಂದು ಕರೆಯುತ್ತಾನೆ ?

ಅ) ಮೋಕ್ಷ ಆ) ಸೂತಕ ಇ) ಬಂಧನ ಈ) ತಗಹು

3) ಕೈಲಾಸದಲ್ಲಿ ಚೆನ್ನಯ್ಯನಿಗೆ ಯಾವ ಪದವಿ ಲಭಿಸಿತು ?

ಅ) ದೇವ ಪದವಿ ಆ) ಗಣ ಪದವಿ ಇ) ಶರಣ ಪದವಿ ಈ) ಋಷಿ ಪದವಿ

4) ಮಾದೇವ ಯಾರ ಮಕ್ಕಳನ್ನು ದತ್ತುವಾಗಿ ಪಡೆದನು ?

ಅ) ಸಂಕಮ್ಮ ಆ) ವೆಂಕಮ್ಮ ಇ) ನಿಂಗಮ್ಮ ಈ) ಪಾರವ್ವ

5) ಕರುಳಬಳ್ಳಿಗೆ ತೊಡರಿದ ಹುಳು ಯಾವುದು ?

ಅ) ಜಂತುಹುಳು ಆ) ಪಾರ್ಥೇನಿಯಂ ಇ) ಎರೆಹುಳು ಈ) ಕ್ಯಾನ್ಸರ್

6) ವೈದ್ಯಾಧಿಕಾರಿ ಇಲ್ಲಿಯವರೆಗೆ ಯಾವ ರೀತಿಯ ನ್ಯಾಯವನ್ನು ಕಂಡಿರಲಿಲ್ಲ ?

ಅ) ಹಂಸ ನ್ಯಾಯ ಆ) ಕಾಕತಾಳ ನ್ಯಾಯ

ಇ) ಹಂಸಕ್ಷೀರ ನ್ಯಾಯ ಈ) ಕಾಕನ್ಯಾಯ

7) "ಕೆಟ್ಟು ಹೋದ ಗಡಿಯಾರ ಕೂಡ ದಿನದಲ್ಲಿ ಎರಡು ಸಾರಿ ಸರಿಯಾದ ವೇಳೆಯನ್ನು ಸೂಚಿಸುತ್ತದೆ" – ಈ ಮಾತು ಕೆಳಗಿನ ಯಾವ ಹೇಳಿಕೆಯನ್ನು ಸಮರ್ಥಿಸುತ್ತದೆ ?

ಅ) ಜ್ಯೋತಿಷ್ಯದ ಅಧಿಕೃತತೆಯನ್ನು ಸೂಚಿಸುತ್ತದೆ

ಆ) ಜ್ಯೋತಿಷ್ಯದ ಅನಿಶ್ಚಿತತೆಯನ್ನು ಸೂಚಿಸುತ್ತದೆ

ಇ) ಜ್ಯೋತಿಷ್ಯದ ಅರ್ಥಪೂರ್ಣತೆಯನ್ನು ಸೂಚಿಸುತ್ತದೆ

ಈ) ಜ್ಯೋತಿಷ್ಯದ ಪ್ರಶ್ನಾತೀತತೆಯನ್ನು ಸೂಚಿಸುತ್ತದೆ

P.T.O.

https://www.karnatakaboard.com

8) ಪಿಶಾಚಿಗಳು ಯಾರ ಹೆಸರು ಕೇಳಿದರೆ ಹೆದರುತ್ತವೆ ?

ಅ) ರಾಜನ    ಆ) ಶಿವನ    ಇ) ಕೋಡಂಗಿಯ    ಈ) ಭಾಗವತನ

9) ಡೊಳ್ಳೇಶಂಕರನಿಂದ ಬೇರು ಕಿತ್ತುಕೊಳ್ಳಲು ಪಿಶಾಚಿ ಯಾವ ವೇಷದಲ್ಲಿ ಬರುತ್ತದೆ ?

ಅ) ಮಗು    ಆ) ಮುದುಕ    ಇ) ಮುದುಕಿ    ಈ) ರಾಜಕುಮಾರಿ

10) "ತಲೆಯಿಂದ ಕೆಲಸ ಮಾಡಿದರೆ, ನೀವೇ ನೋಡಿದಿರಲ್ಲ, ತಲೆ ಸಿಡಿಯುತ್ತದೆ. ಆದ್ದರಿಂದ ನಾವು ಮೊದಲಿನ ಹಾಗೆ ಕೈ ಮತ್ತು ಬೆನ್ನುಗಳಿಂದ ಕೆಲಸ ಮಾಡೋದೇ ವಾಸಿ" – ಡೊಳ್ಳೇಶಂಕರನ ಈ ಮಾತು ಕೆಳಗಿನ ಯಾವ ಹೇಳಿಕೆಯನ್ನು ಸಮರ್ಥಿಸುತ್ತದೆ ?

ಅ) ತಲೆಯಿಂದ ಕೆಲಸ ಮಾಡಿದರೆ ತಲೆ ಸಿಡಿಯುತ್ತದೆ    ಆ) ಕೈಗಳಿಂದ ಕೆಲಸ ಮಾಡಿದರೆ ಕೈ ನೋವಾಗುತ್ತದೆ

ಇ) ಶ್ರಮ ಸಂಸ್ಕೃತಿಯನ್ನು ನಿರಾಕರಿಸುತ್ತದೆ    ಈ) ಶ್ರಮ ಸಂಸ್ಕೃತಿಯನ್ನು ಬೆಂಬಲಿಸುತ್ತದೆ

II. ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (5x1=5)

(ಲುಂಬಿನಿ, ಬಾಸಿ, ಕೋಟೆಗುಡ್ಡೆ, ರೈತ, ಕೇಡಿಗುಡ್ಡೆ, ಕುಮಾರಭಟ)

11) ನೀರಿಗಾಗಿ ಕರಿಯ __________ ತಪಿಸುತ್ತಿದ್ದನು.

12) __________ ಗೌತಮ ಬುದ್ಧನ ಜನ್ಮಸ್ಥಳವಾಗಿದೆ.

13) ರಂಗರಾವ್ ಕೈಗಾರಿಕಾ ತರಬೇತಿ ಶಾಲೆಯನ್ನು __________ ಯಲ್ಲಿ ಸ್ಥಾಪಿಸಿದರು.

14) ರತ್ನಾಕರಂಡಕವು __________ ಕೈಯಿಂದ ಕೆಳಗೆ ಬಿದ್ದಿತು.

15) ಲೇಖಕರು ಸಿಪಾಯಿ ದಂಗೆಯನ್ನು __________ ದಂಗೆ ಎಂದು ಕರೆದಿದ್ದಾರೆ.

III. ಹೊಂದಿಸಿ ಬರೆಯಿರಿ. (5x1=5)

| | |
|---|---|
| 16) ತಲ್ಲಣಿಸದಿರು ಕಂಡ್ಯ ತಾಳು ಮನವೆ | ಅ) ಎಚ್. ಎಲ್. ಪುಷ್ಪ |
| 17) ಎಂದಿಗೆ | ಆ) ಲಕ್ಕೂರು ಸಿ. ಆನಂದ |
| 18) ಸುನಾಮಿ ಹಾಡು | ಇ) ಬಸವರಾಜ ವಕ್ಕುಂದ |
| 19) ದೇವರಿಗೊಂದು ಅರ್ಜಿ | ಈ) ಕನಕದಾಸರು |
| 20) ಜೀವಕೆ ಇಂಧನ | ಉ) ಎಚ್. ಎಸ್. ಶಿವಪ್ರಕಾಶ |
| | ಊ) ಬಿ. ಸಿ. ರಾಮಚಂದ್ರಶರ್ಮ |

## ಆ – ವಿಭಾಗ

IV. ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. (3x2=6)

21) ಚೆನ್ನಯ್ಯನ ಗುಪ್ತಭಕ್ತಿ ಯಾವ ರೀತಿಯದು ?

22) ವೃಕ್ಷವನ್ನು ಆದಿಕೇಶವ ಹೇಗೆ ಸಲಹುತ್ತಾನೆ ?

23) ಹೊಟ್ಟೆಯೊಳಗಿನ ಮಗುವು ಯಾವ ವರವನ್ನು ಬೇಡುತ್ತಿದೆ ?

24) ಅಮ್ಮಿಯನ್ನು ಸೃಷ್ಟಿಕರ್ತೆಯೆಂದು ಏಕೆ ಕರೆಯಲಾಗಿದೆ ?

https://www.karnatakaboard.com

ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. **(2×2=4)**

25) ರಾಗಿಯಲ್ಲಿ ಯಾವ ರೋಗಗಳನ್ನು ತಡೆಯಬಲ್ಲ ಗುಣವಿದೆ ?

26) ಮಹಾನ್ ವ್ಯಕ್ತಿಗಳ ದರ್ಶನ ಅರ್ಥವಾಗುವುದು ಹೇಗೆ ?

27) ರಂಗರಾವ್ ತಮ್ಮ ಉಯಿಲಿನಲ್ಲಿ ಏನು ಬರೆದಿದ್ದರು ?

28) ಕೃಷಿ ಜಮೀನನ್ನು ಯಾರು ಖರೀದಿಸುವಂತಿಲ್ಲ ?

ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. **(3×2=6)**

29) ಸಾವ್ಕಾರಣ್ಣನು ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದನು ?

30) ಸೈತಾನನು ಮೂರು ಪಿಶಾಚಿಗಳನ್ನು ಭೂಲೋಕಕ್ಕೆ ಏಕೆ ಕಳುಹಿಸಿದ್ದನು ?

31) ಬೋಳೇಶಂಕರ ಹುಡುಗಿಯರಿಗೆ ಚಿನ್ನ ಕೊಟ್ಟದ್ದಕ್ಕೆ ಸಾವ್ಕಾರಣ್ಣನು ಏನು ಹೇಳುತ್ತಾನೆ ?

32) ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ ?

## ಇ – ವಿಭಾಗ

V. ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(2×3=6)**

33) ಜನನಿಸ್ತನ್ಯಮನುಂಡೆನಾಂ ಬಳಿಕೆ ನೀಂ

34) ಹೆತ್ತಪ್ಪನಂಗೆ ಸಲುಪೀದೆ https://www.karnatakaboard.com

35) ಸರಿಗಾತ್ರವಾಗಿ ಸಮನಿಸಲಿ ನಿನ್ನತನ.

ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(1×3=3)**

36) ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ

37) ನಮಗಿದು ಅಭ್ಯುದಯ ಕಾಲ, ಮಹಾಸುದಿನ.

ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(1×3=3)**

38) ಇವನಿಗೇನು ಹೆಂಡತೀನೇ ? ಮಕ್ಕಳೇ ?

39) ದಾರಿ ತಪ್ಪಿದವರಿಗೆ ಗಾದೆ ಬಲ್ಲವರು ಬುದ್ಧಿ ಹೇಳುತ್ತಾರೆ.

## ಈ – ವಿಭಾಗ

VI. ಅ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. **(2×4=8)**

40) ಅಭಿಮನ್ಯುವಿನ ಶೌರ್ಯ ಸಾಹಸಗಳನ್ನು ದುರ್ಯೋಧನ ಹೇಗೆ ಹೊಗಳುತ್ತಾನೆ ?

41) ಲೋಕದ ಭಜನೆಯಲ್ಲಿ ಸಿಲುಕಿದವರಿಗೆ ಮುಕ್ತಿಯಿಲ್ಲ ಎಂಬುದನ್ನು ಅಕ್ಕಮಹಾದೇವಿ ಹೇಗೆ ನಿರೂಪಿಸಿದ್ದಾಳೆ ?

42) ರಾಮನ ಆಜ್ಞೆಯನ್ನು ಲಕ್ಷ್ಮಣನು ಸೀತೆಗೆ ಹೇಗೆ ತಿಳಿಸಿದನು ?

43) ಕುವೆಂಪು ಅವರು 'ಕೂಗಾಟದ ರಾಜಕೀಯ ನಾಟಕ' ಎಂದು ಹೇಳಿರುವ ಹಿನ್ನಲೆ ಏನು ?

https://www.karnatakaboard.com

ಆ) ಕೆಳಗಿನ ಯಾವುದಾದರೂ **ಒಂದು** ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. **(1×4=4)**

44) ಕರಿಸಿದ್ದೇಗೌಡ ತನ್ನ ಮೊಮ್ಮಗನಿಗೆ ಗಾಂಧಿಯ ಹೆಸರಿಡಲು ಕಾರಣವೇನು ? ತಿಳಿಸಿ.

45) ಮಾಸ್ತರು ಮತ್ತು ಅಂಬವ್ವರ ಪ್ರೀತಿ ಕಡಲಲ್ಲಿ ಕತೆಗಾರರ ಬಾಲ್ಯ ಹೇಗೆ ಕಳೆಯಿತು ? ವಿವರಿಸಿ.

46) ಪಲಾಯನ ಮಾಡುತ್ತಿದ್ದ ಹುಲಿಯನ್ನು ನರಿ ಹೇಗೆ ಸಮಾಧಾನಪಡಿಸಿ ಒಂದಕ್ಕೆ ಕರೆತಂದಿತು ತಿಳಿಸಿ.

ಇ) ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. **(1×4=4)**

47) ಬೋಳೇಶಂಕರನ ಅಣ್ಣಂದಿರೇ ವಾಸಿ ಎಂದು ಪಿಶಾಚಿ ಹೇಳುತ್ತಿರುವ ಕಾರಣಗಳನ್ನು ವಿವರಿಸಿ.

48) ಯುದ್ಧ ಮಾಡಲು ಸೈನಿಕರು ನಿರಾಕರಿಸುತ್ತಿರುವುದರ ಕಾರಣಗಳನ್ನು ತಿಳಿಸಿ.

## ಭಾಷಾಭ್ಯಾಸ

VII. ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗನುಗುಣವಾಗಿ ಉತ್ತರಿಸಿರಿ. **(4×2=8)**

49) ಕೆಳಗಿನ ಎರಡು ಪದಗಳನ್ನು ಬಿಡಿಸಿ ಬರೆಯಿರಿ.
ಕತ್ತೆತ್ತಿ, ಗುಪ್ತಾರಾಧನೆ, ವೈದ್ಯಾಧಿಕಾರಿ.

50) ಕೆಳಗಿನ ಎರಡು ಪದಗಳ ವಿರುದ್ಧ ಪದಗಳನ್ನು ಬರೆಯಿರಿ.
ಆರೋಗ್ಯ , ನಂಬಿಕೆ, ಕತ್ತಲು

51) ಕೆಳಗಿನ ಎರಡು ಪದಗಳಿಗೆ ತದ್ಭವಗಳನ್ನು ಬರೆಯಿರಿ.
ಆಕಾಶ, ಪ್ರಸಾದ, ಶೃಂಗಾರ

52) ಕೆಳಗಿನ ಎರಡು ಪದಗಳಿಗೆ ನಾನಾರ್ಥ ಬರೆಯಿರಿ.
ಕಾಡು, ಸೋಮ, ಗಂಡ.

https://www.karnatakaboard.com
Whatsapp @ 9300930012
Send your old paper & get 10/-
अपने पुराने पेपर्स भेजे और 10 रुपये पायें,
Paytm or Google Pay से

53) ಕೆಳಗಿನ ಎರಡು ದ್ವಿರುಕ್ತಿ ಪದಗಳನ್ನು ಉಪಯೋಗಿಸಿ, ವಾಕ್ಯಗಳನ್ನು ರಚಿಸಿ.
ಅಡಿಗಡಿಗೆ, ಒಳಗೊಳಗೆ, ಮೆಲ್ಲಮೆಲ್ಲನೆ

54) ಕೆಳಗಿನ ಎರಡು ಪದಗಳಿಗೆ ಗ್ರಾಂಥಿಕ ರೂಪ ಬರೆಯಿರಿ.
ಏಗ, ಕುಂತ್ಕಂಡು, ರವುಸು.

ಆ) ಕೆಳಗಿನ ಯಾವುದಾದರೂ **ಒಂದನ್ನು** ಕುರಿತು ಪ್ರಬಂಧ ಬರೆಯಿರಿ. **(1×4=4)**

55) ಬರಗಾಲ

**ಅಥವಾ**

ಜಾಗತೀಕರಣ.

ಇ) ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ. **(1×4=4)**
(ಯಾವುದೇ ಪತ್ರಲೇಖನದಲ್ಲಿ ಹೆಸರು, ಊರು ನಮೂದಿಸಬಾರದು. ಸಂಕೇತಾಕ್ಷರಗಳನ್ನು ಮಾತ್ರ ಬಳಸಬೇಕು.
ಉದಾ : ಹೆಸರಿಗೆ ಅ.ಬ.ಕ., ಊರಿಗೆ : ಕಚಟತಪ )

56) ನಿಮ್ಮ ಕಾಲೇಜಿನ ವಾರ್ಷಿಕ ಕ್ರೀಡಾಕೂಟವನ್ನು ಕುರಿತು ಸ್ನೇಹಿತ/ಸ್ನೇಹಿತೆಗೆ ಪತ್ರ ಬರೆಯಿರಿ.

**ಅಥವಾ**

ನಿಮ್ಮೂರಿನಲ್ಲಿ ಡಿಜಟಲ್ ಗ್ರಂಥಾಲಯವನ್ನು ಸ್ಥಾಪಿಸಲು ವಿನಂತಿಸಿಕೊಂಡು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಿರಿ.

https://www.karnatakaboard.com